665 (808) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯುವಜನ ಸೇವೆಗಾಗಿ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ಯೋಜನೆಗಳ ಅನುದಾನವಾರು ವಿವರ ನೀಡುವುದು).

ಆ) ರಾಜ್ಯ ಸರ್ಕಾರದಿಂದ ಯುವಜನ ಸೇವೆಗಾಗಿ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ಯೋಜನಾವಾರು ವಿವರ ನೀಡುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಕಳೆದ ಎರಡು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯುವಜನ ಸೇವೆಗಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆ) ರಾಜ್ಯ ಸರ್ಕಾರದಿಂದ ಯುವಜನ ಸೇವೆಗಾಗಿ ಕಳೆದ ಎರಡು ವರ್ಷಗಳಲ್ಲಿ 2003-04ನೇ ಸಾಲಿನಲ್ಲಿ ಯೋಜನೆ ಅಡಿಯಲ್ಲಿ 679.86 ಲಕ್ಷಗಳು ಹಾಗೂ ಯೋಜನೇತರ ಅಡಿಯಲಿ ರೂ. 117.75 ಲಕ್ಷಗಳು ಒಟ್ಟು 815.61 ಲಕ್ಷಗಳನ್ನು ಬಿಡುಗಡೆ ಮಾಡಿದೆ.

2004-05ನೇ ಸಾಲಿಗೆ ಯೋಜನೆಯಡಿಯಲ್ಲಿ 9.00 ಲಕ್ಷ ರೂ.ಗಳನ್ನು ಯೋಜನೇತರದಡಿಯಲ್ಲಿ 100.77 ಲಕ್ಷ ರೂ.ಗಳನ್ನು ಒಟ್ಟು 109.77 ಲಕ್ಷ ರೂ.ಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದೆ.

ಈವರೆವಿಗೂ ಯೋಜನೆಯಡಿಯಲ್ಲಿ ರೂ. 6.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ. 3.00 ಲಕ್ಷ ರೂ.ಗಳು ಬಾಕಿ ಇರುತ್ತವೆ. ಯೋಜನೇತರದಡಿಯಲ್ಲಿ 89.16 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ. 11.61 ಲಕ್ಷಗಳು ಉಳಿಕೆ ಇರುತ್ತದೆ. ಉಳಿದ ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿಯ ಅನುದಾನವನ್ನು ಫೆಬ್ರವರಿ 2005ರ ಅಂತ್ಯದಲ್ಲಿ ಬಿಡುಗಡೆ ಮಾಡಲಾಗುವುದು.

666 (809) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಸುಳ್ಯ ಕ್ಷೇತ್ರದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಬಳಸುತ್ತಿದ್ದ ಗ್ರಾಮೀಣ ಜನರ ಸಂಪರ್ಕ ರಸ್ತೆಗಳನ್ನು ಅರಣ್ಯ ಇಲಾಖೆಗೆ ಸಂಬಂಧಿಸಿದೆಯೆಂದು ಮುಚ್ಚಿ ಗ್ರಾಮೀಣ ಜನರ ಸಂಪರ್ಕಕಾಗಿ ತಡೆಯೊಡ್ಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಕ್ಷೇತ್ರದ ಅರಣ್ಯ ಪ್ರದೇಶಗಳಲ್ಲಿ ಕರ್ನಾಟಕ ಅರಣ್ಯ ಅಧಿನಿಯಮ 1963 ಮತ್ತು ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ನಿಯಮಗಳ ಉಲ್ಲಂಘನೆಯಿಂದ ರಸ್ತೆಗಳನ್ನು ನಿರ್ಮಿಸಲಾಗಿದೆ. ಇದು ಅರಣ್ಯ ಇಲಾಖೆಯ ಗಮನಕ್ಕೆ ಬಂದಿದೆ. ಈ ಪ್ರಕರಣಗಳಲ್ಲಿ ವಿಚಾರಣೆ ನಡೆಯುತ್ತಿದೆ. ಆದರೆ ಇಂತಹ ಯಾವುದೇ ರಸ್ತೆಗಳನ್ನು ತಡೆದಿರುವುದಿಲ್ಲ.

ಇ) ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ.